ಡಿಪಾರ್ಟ್‌ಮೆಂಟಿನವರೇ ಒಂದು ಪ್ರೋಗ್ರಾಂ ಹಾಕಿಕೊಂಡು ಇನ್‌ಸ್ಟಾಲ್‌ಮೆಂಟ್ ಬೇಸಿಸ್‌ಮೇಲೆ, ವರ್ಷೇ ವರ್ಷೇ ಪಂಪುಸೆಟ್ಟುಗಳನ್ನು ಹಂಚುತ್ತಾ ಇದ್ದರೂ ಅವರಿಗೆ ಸಾಕಷ್ಟು ಹಣವಿರಲಿಲ್ಲ. ಆದ್ದರಿಂದ ಒಂದು ಸಣ್ಣ ಸ್ಕೀಮನ್ನು ಹಾಕಿಕೊಂಡಿದ್ದರು. ಮೂರನೆಯ ಯೋಜನೆಯಲ್ಲಿ 8 ಸಾವಿರ ಪಂಪುಸೆಟ್ಟುಗಳ ಸ್ಕೀಮು ಹಾಕಿಕೊಂಡು, ಕೇಂದ್ರ ಸರಕಾರದಿಂದ ಹೆಚ್ಚಿಗೆ ಹಣ ಪಡೆದೆವು. ಒಂದೇ ವರ್ಷ 5 ಸಾವಿರ ಪಂಪುಸೆಟ್ಟುಗಳನ್ನು ಅಲಾಟ್ ಮಾಡಿದೆವು. ಬರುವ ವರ್ಷಕ್ಕೆ 7½ ಸಾವಿರ ಸೆಟ್ಟುಗಳ ಪ್ರೋಗ್ರಾಂ ಹಾಕಿದ್ದೇವೆ. ಸರ್ಕಾರ, ಆ ಇರಾಖೆಯವರು, ಇಬ್ಬರೂ ಕರೆತು ಇದರ ವ್ಯವಸ್ಥೆ ಮಾಡುತ್ತಾ ಇದ್ದೇವೆ.

ಶ್ರೀ ಕುಂದೂರು ರುದ್ರಪ್ಪ.—ಚನ್ನಗಿರಿ ತಾಲ್ಲೂಕಿಗೆ 213 ದಾವಿಗಳನ್ನು ಮುಂಜೂರು ಮಾಡಿದ್ದರೂ ಒಂದು ಪಂಪುಸೆಟ್ಟನ್ನೂ ಕೊಟ್ಟಿಲ್ಲ ಏಕೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಮ್ಮ ತಾಲ್ಲೂಕಿಗೆ ಸರ್ಕಾರದವರು ಬಹಳ ಉದಾರವಾಗಿ ಕೊಡುತ್ತಾ ಬಂದಿದ್ದಾರೆ. ತಾವು ಕೇಳಿರುವ ಫಿಗರ್ಸು 1962ನೇ ಇನವಿಗೆ. ಆಗ ಪಂಪುಸೆಟ್ಟು ಗಳನ್ನು ಹೆಚ್ಚಾಗಿ ಕೊಡುವ ಪ್ರೋಗ್ರಾಂ ಇರಲಿಲ್ಲ. 1963-64ರಲ್ಲಿ ಹೆಚ್ಚಿಗೆ ಕೊಟ್ಟಿರುವುದು. ನೀವು ಈರೀತಿ ಇನ್ನೊಂದು ಪ್ರಶ್ನೆಯನ್ನು ಪ್ರತ್ಯೇಕವಾಗಿ ಹಾಕಿದರೆ, ನಿಮ್ಮ ತಾಲ್ಲೂಕಿನ ವಿಷಯದಲ್ಲಿ ಉದಾರವಾಗಿ ಕೊಟ್ಟಿದ್ದಾರೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಇದಕ್ಕೆ ಸಾಲ ಕೊಡುವುದು ಒಳ್ಳೆಯದಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಲ ಕೊಟ್ಟರೆ ದುರುಪಯೋಗಪಡಿಸಿಕೊಳ್ಳುತ್ತಾರೆ ಎಂದು ತಾವೇ ಬಂದು ಅನೇಕ ಸಲ ಹೇಳಿದ್ದೀರಿ. ಈ ಹಣವನ್ನು ಮಾದುವೆ, ಮುಂಜಿಗಳಿಗೆ ಉಪಯೋಗಿಸಿ ಕೊಳ್ಳುವುದು ಬೇಡ, ಪಂಪುಸೆಟ್ಟುಗಳನ್ನೇ ಕೂಡಿ ಅಂತ ತಾವೇ ಹೇಳುತ್ತೀರ.

Bullockmen Employed in various Agricultural Research Stations

*Q—803 **Sri B. L. GOWDA** (Challakere).—

Will the Government be pleased to state:—

(*a*) whether the bullockmen employed in the various agricultura Research Stations are borne on the regular or contingent establishment of the respective Farms ;

(*b*) how are bullockmen in Seed Farms employed, whether on contingent or regular establishment ;

(*c*) whether the bullockmen employed in agricultural Research Stations were given the benefit of revised scales of pay as per 1957 and 1961 Government Order ;

(*d*) whether they have received any representation in this behalf from the bullockmen of Agricultural Research Station, Bobbur in Hiriyur Taluk, Chitradurga District ;

(*e*) if the answer to (d) is in the affirmative, what is the action taken ?

A.— **Sri H. C. BORAIAH** (Parliamentary Secretary to the Minister for Agriculture).—

(*a*) The posts of bullockmen sanctioned under the Plan schemes are on regular establishment. Others are on contingent paid establishment.

(*b*) On the regular establishment.

(SRI H. C. BORAIAH)

(c) Some of the employees are given the benefit of 1957 scales. As regards the benefit of 1961 scales it is limited only to the staff borne on regular establishment.

(d) Yes.

(e) This staff is borne on contingent paid establishment and as such this staff is not given the benefit of 1961 scales. However these employees paid from contingencies are paid a fixed increase of Rs. 5/- p.m. with effect from 1st January 1961.

ಶ್ರೀ ಬಿ. ಎಲ್. ಗೌಡ.—ನನ್ನ ಮೂಲ ಪ್ರಶ್ನೆಯಲ್ಲಿ ಬುಲಕ್ ಮ್ಯಾನ್ ಎಂದು ಕೇಳಿದ್ದೇನೆ. ಕನ್ನಡದಲ್ಲಿ ಭಾಷಾಂತರ ಮಾಡುವಾಗ ಪಶುಪಾಲಕರು ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ದನ ಕಾಯುವವರು ಎಂದು ತಿಳಿದುಕೊಂಡು ಉತ್ತರ ಕೊಟ್ಟಿದ್ದಾರೆಯೇ ಅಥವಾ ವ್ಯವಸಾಯ ಮಾಡುವ ಕೂಲಿಕಾರರು ಎಂದು ತಿಳಿದುಕೊಂಡಿದ್ದಾರೆಯೇ ಸ್ವಾಮಿ?

ಶ್ರೀ ಎಚ್. ಸಿ. ಬೋರಯ್ಯ.—ಬುಲಕ್‌ಮ್ಯಾನ್ ಎಂದು ಇಂಗ್ಲಿಷಿನಲ್ಲಿದೆ. ಅದಕ್ಕೆ ಕನ್ನಡದಲ್ಲಿ ಆ ರೀತಿ ಹಾಕಿದೆ.

Mr. SPEAKER.—Is the Hon. Member criticising the translation? The Hon'ble Minister is not responsible for the translation. My Department *i.e*, Legislature sect. and Myself are responsible for the translation.

ಶ್ರೀ ಬಿ. ಎಲ್. ಗೌಡ.—ಬುಲಕ್‌ಮ್ಯಾನ್‌ಗಳಿಗೆ ಸಂಘಂಧಪಟ್ಟಹಾಗೆ 1957ರಲ್ಲಿ ಮತ್ತು 1961 ರಲ್ಲಿ ಎರಡು ಸಲ ಸಂಬಳಗಳ ಪುನರ್ವಿಮರ್ಶೆಯಾಗಿದ್ದರೂ ಕಂಟಿಂಜೆಂಟ್ ಸಿಬ್ಬಂದಿವರ್ಗಕ್ಕೆ 1957 ರ ಪುನರ್ವಿಮರ್ಶಿತ ಸಂಬಳಗಳನ್ನು ಕೊಟ್ಟು 1961ರಲ್ಲಿ ಕೊಡದೆ ಇರಲು ಕಾರಣವೇನು ?

ಶ್ರೀ ಎಚ್. ಸಿ. ಬೋರಯ್ಯ.—1957ರಲ್ಲಿ ಅವರಿಗೆ ಪುನರ್ವಿಮರ್ಶಿತ ಸಂಬಳಗಳನ್ನು ಕೊಡ ರಾಯಿತು. ಆದರೆ 1960ನೆ ಇಸವಿಯಲ್ಲಿ ಆ ರೀತಿ ಹಿಂದೆ ಕೊಟ್ಟದ್ದು ಸರಿಯಲ್ಲವೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದ್ದರಿಂದ ಅವರಿಗೆ 1961ರಲ್ಲಿ ಪುನರ್ವಿಮರ್ಶಿತ ಸಂಬಳಗಳನ್ನು ಕೊಡುವು ದಕ್ಕಾಗಲಲ್ಲ. ಅವರ ಹುದ್ದೆಗಳನ್ನು ಈಕ್ವೇಟ್ ಮಾಡಬೇಕಾಗಿದೆ. ಅದಾದ ನಂತರ ಅವರನ್ನು ಖಾಯಂ ನೌಕರರ ವರ್ಗಕ್ಕೆ ಸೇರಿಸಿಕೊಂಡರೆ 1961ರ ಪುನರ್ವಿಮರ್ಶಿತ ಸಂಬಳಸಾರಿಗೆಗಳನ್ನು ಕೊಡಬಹುದು.

ಶ್ರೀ ಬಿ. ಎಲ್. ಗೌಡ.—ಸೀಡ್ ಫಾರಂಗಳಲ್ಲಿ ಕೆಲಸ ಮಾಡುತ್ತಾ ಇರತಕ್ಕ ಬುಲಕ್‌ಮ್ಯಾನ್ ಗಳು ಖಾಯಂ ಸಿಬ್ಬಂದಿವರ್ಗಕ್ಕೇ ಸೇರಿರುವಾಗ, ಸಂಶೋಧನಾ ಕೇಂದ್ರಗಳಿಗೆ ಸೇರಿದವರು ಕಂಟಿಂ ಜೆಂಟ್ ಸಿಬ್ಬಂದಿ ವರ್ಗಕ್ಕೆ ಒಳಪಟ್ಟಿರುವುದಕ್ಕೆ ಕಾರಣವೇನು? ಅವರ ಕೆಲಸದಲ್ಲಿ ಏನಾದರೂ ವ್ಯತ್ಯಾ ಸವಿದೆಯೇ ಸ್ವಾಮಿ?

Sri B.D. JATTI (Minister for Finance).—I will explain the position. If the posts are temporary, unless the posts are made permanent, they are not entitled to get revised pay scales.

ಶ್ರೀ ಬಿ. ಎಲ್. ಗೌಡ —ಅವರ ಕೆಲಸದಲ್ಲಿ ಏನಾದರೂ ವ್ಯತ್ಯಾಸವಿದೆಯೇ ಸ್ವಾಮಿ?

ಶ್ರೀ ಎಚ್. ಸಿ. ಬೋರಯ್ಯ.—ವ್ಯತ್ಯಾಸವಿದೆ ಎಂದು ಹೇಳುವುದಕ್ಕಾಗುವುದಿಲ್ಲ ?

ಶ್ರೀ ಬಿ. ಎಲ್. ಗೌಡ.— ಬಬ್ಬೂರು ಫಾರಂನವರು ಒಂದು ಮಾನವಿಯನ್ನು ಕೊಟ್ಟಿದ್ದಾರೆ. ಅವರು ಎಷ್ಟು ದಿವಸದಿಂದ ಕೆಲಸ ಮಾಡಿದ್ದಾರೆ ಸ್ವಾಮಿ?

ಶ್ರೀ ಎಚ್. ಸಿ. ಬೋರಯ್ಯ.—ಪ್ರತಿಯೊಬ್ಬರ ವಿವರಣೆಯನ್ನೂ ಕೊಡುವುದಕ್ಕಾಗುವುದಿಲ್ಲ. ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿದರೆ ಬಹುಶಃ ಆ ವಿವರಗಳನ್ನೆಲ್ಲ ಕೊಡಬಹುದು.

ಶ್ರೀ ವಿ.ಮುನಿಯಪ್ಪ.—ಅವರು ಕೊಟ್ಟಿರುವ ಮಾನವಿಯಲ್ಲಿ ಏನು ಪರಿಹಾರವಾಗಬೇಕು ಎಂದು ಕೇಳಿಕೊಂಡಿದ್ದಾರೆ ಸ್ವಾಮಿ?

ಶ್ರೀ ಎಚ್. ಸಿ. ಬೋರಯ್ಯ.—ತಮ್ಮ ಸ್ಥಿತಿಗಳನ್ನು ಉತ್ತಮ ಪಡಿಸಬೇಕು ಎಂದು. ಅದು ಸರ್ಕಾರದ ಗಮನಕ್ಕೆ ಬಂದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ.ಪಿ. ರೇವಣಸಿದ್ದಪ್ಪ.—ಖಾಯಂ ಆಗುವವರೆಗೆ ಪುನರ್ವಿಮರ್ಶಿತ ಸಂಬಳ ಸಾರಿಗೆಗಳನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಅವರನ್ನು ಖಾಯಂ ಮಾಡಿದವರು ಯಾರು ಸ್ವಾಮಿ?

ಶ್ರೀ ಎಚ್. ಸಿ. ಬೋರಯ್ಯ.—ಸರ್ಕಾರದವರು ಖಾಯಂ ಮಾಡಬೇಕಾಗಿದೆ.

ಶ್ರೀ ಮಸಿಯಪ್ಪ.—ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದು ಎಂದರೆ ಬಹಳ ಜನರಲ್ ಆಯಿತು. ಪುನರ್ವಿಮರ್ಶೆ ನೇರವಾಗಿ ಏನು ಪರಿಹಾರವನ್ನು ಕೊಡಬೇಕೆಂದು ಕೇಳಿಕೊಂಡಿದ್ದಾರೆ? I submit that they have represented requesting to regularise their services for the benefits of pension, etc.

ಶ್ರೀ ಎಚ್. ಸಿ. ಬೋರಯ್ಯ.—ಉತ್ತರದ ಅರ್ಥವೇ ಅದು. ಅವರ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದು ಎಂದರೆ ಈಗ ಖಾಯಂ ಆದ ಬುಲಕ್ ಮ್ಯಾನ್‌ಗೆ ಅನ್ವಯಿಸುತ್ತಿರುವ ಸರ್ವಿಸ್ ಕಂಡಿಷನ್‌ಗಳನ್ನು ಇವರಿಗೂ ಅನ್ವಯಿಸಬೇಕು ಎನ್ನುವುದು.

ಶ್ರೀ ಬಿ.ಎಲ್. ಗೌಡ.—ಖಾಯಂ ಆಗಿ ನೇಮಕ ಮಾಡಿಕೊಂಡಿರತಕ್ಕವರಿಗೆ ಸಂಬಳಸಾರಿಗೆಗಳು ಎಷ್ಟು ಸಿಕ್ಕುತ್ತದೆ ಮತ್ತು ಕಂಟಿಂಜೆಂಟ್ ಸಿಬ್ಬಂದಿವರ್ಗದಲ್ಲಿ ಇರುವವರಿಗೆ ಎಷ್ಟು ಸಿಕ್ಕುತ್ತದೆ?

ಶ್ರೀ ಎಚ್.ಸಿ. ಬೋರಯ್ಯ.—ಖಾಯಂ ಆಗಿ ಇರತಕ್ಕವರಿಗೆ 1961ನೆ ಪುನರ್ವಿಮರ್ಶಿತ ಸ್ಕೇಲುಗಳ ಪ್ರಕಾರವಾಗಿ 50-1-60 ಮತ್ತು ತುಟ್ಟಿಭತ್ಯ; ಕಂಟಿಂಜೆಂಟ್ ಸಿಬ್ಬಂದಿವರ್ಗಕ್ಕೆ ರೂ. 12+30 ಎಂದು ಕೂಟ್ಟು ಅದು ಸುಮಾರು ರೂ42 ರಿಂದ ರೂ60ರವರೆಗೂ ಅವರಿಗೆ ಸಿಕ್ಕುತ್ತಿದೆ. ಹೆಬ್ಬಾಳದಲ್ಲಿ ಇರತಕ್ಕವರಿಗೆ ಲೇಬರ್ ಡಿಸ್ಪ್ಯೂಟ್ ಬಂದು ರೂ50+10 ಕೊಡಬೇಕೆಂದು ತೀರ್ಮಾನವಾಗಿ 1961 ರಿಂದ ಕೊಡುತ್ತಿದ್ದೇವೆ.

Sri V. MASIAPPA.—May I know for how long this representation has been pending and how much more time would the Government take to finalise this matter ?

ಶ್ರೀ ಎಚ್. ಸಿ. ಬೋರಯ್ಯ.—ಅವರಿಗೆ ನಾವು 1957ನೇ ಪುನರ್ವಿಮರ್ಶಿತ ಸ್ಕೇಲುಗಳನ್ನು ಕೊಟ್ಟಿದ್ದೇವೆ. ಆದರೆ ಹಾಗೆ ಕೊಡತಕ್ಕದ್ದು ಸರಿಯಲ್ಲವೆನ್ನುವ ತೀರ್ಮಾನಕ್ಕೆ ಬಂದ ಮೇಲೆ ಅವತ್ತಿನಿಂದ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಅದು ಸರ್ಕಾರದ ಮುಂದೆ ಇದೆ ಮತ್ತು ತೀವ್ರವಾಗಿ ಕ್ರಮ ಕೈಕೊಳ್ಳುತ್ತೇವೆ.

Sri V. MASIAPPA.—My question is with regard to the representation pending and how much time do they take to finalise the matter.

ಶ್ರೀ ಎಚ್. ಸಿ. ಬೋರಯ್ಯ.—ಶೀಘ್ರ ಕ್ರಮ ತೆಗೆದುಕೊಂಡು ತೀರ್ಮಾನ ಮಾಡುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—ತಳೆ ಅಭಿವೃದ್ಧಿಗೋಸ್ಕರ ಪಶುಗಳಿಗೆ ಕೃತಕ ಗರ್ಭಧಾರಣೆಗೆ ಇಂಜಕ್ಷನ್ ಕೊಡುತ್ತಾರೆ, ಅದು ಸರಿಯಾಗಿ ಆಗುತ್ತಿಲ್ಲ ಎನ್ನುವುದು ಗೊತ್ತಿದೆಯೇ?

ಶ್ರೀ ಎಚ್. ಸಿ. ಬೋರಯ್ಯ.—ಅದು ಈ ಪ್ರಶ್ನೆಗೆ ಸಂಬಂಧಪಟ್ಟದ್ದಲ್ಲ ಸ್ವಾಮಿ.

ಶ್ರೀ ಕೆ. ಲಕ್ಕಪ್ಪ.—ದನಕಾಯುವ ಜನಗಳಲ್ಲಿಯೂ ತಾರತಮ್ಯ ಜಾಸ್ತಿ ಇರುವುದರಿಂದ ಅವರನ್ನು ಕೂಡ ರೆಗ್ಯುಲರೈಸ್ ಮಾಡುವುದಕ್ಕೆ ಇರತಕ್ಕ ತೊಂದರೆಗಳೇನು? ಏಕೆ ಮಾಡಬಾರದು?

Mr. SPEAKER.—A reply has been given that it is under consideration.

ಶ್ರೀ ಕೆ. ಲಕ್ಕಪ್ಪ.—ಯಾವಾಗ ಮಾಡುತ್ತೀರಿ, ಸ್ವಾಮಿ?

ಶ್ರೀ ಎಚ್. ಸಿ. ಬೋರಯ್ಯ.—ಸರ್ಕಾರದ ಗಮನದಲ್ಲಿದೆ ಎಂದು ಈಗಾಗಲೇ ಹೇಳಿದ್ದೇನೆ ಸ್ವಾಮಿ.

Project for the Feeder Channel to Dharmapura Tank in Hiriyur Taluk.

*Q.—841 **Sri V. MASIAPPA** (Hiriyur).

Will the Government be pleased to state:—

(*a*) whether the project for the feeder channel to Dharmapura tank in Hiriyur Taluk by constructing an Anekat near Hunsehally across the river Suvarnamukhi has been surveyed and estimates prepared;

(*b*) if so, whether the same has been sanctioned;

(*c*) when the work is likely to be started?